<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗ</u>

ಓ.ಎಸ್**1/2018**
ಡಿ.ಡಬ್ಲೂ. **6**

ದಿನಾಂಕ**..07/09/2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

<u>ಪಾಟೀ ಸವಾಲು: ಶ್ರೀ..ಎಸ್.ಎಂ ., ವಕೀಲರಿಂದ ವಾದಿಯ ಪರವಾಗಿ:</u>

1. ನನ್ನ ತಾತ ಸಿದ್ದಪ್ಪ ಒಟ್ಟು ಕುಟುಂಬದಿಂದ 1957 ರಿಂದಲೆ ಬೇರೆಯಾಗಿ ವಾಸವಾಗಿದ್ದರು ಎಂದರೆ ಸರಿ. ನಿಮ್ಮ ತಾತ ಸಿದ್ದಪ್ಪನಿಗೆ ಹೊಸದುರ್ಗದಲ್ಲಿರುವ ಮನೆ, ಕೆಲ್ಲೋಡಿನಲ್ಲಿದ್ದ ಖಾಲಿ ನಿವೇಶನ ಮತ್ತು ಹುಲ್ಲಿನ ಮನೆ ಮತ್ತು ಮೀನಾಕ್ಷಿ ವಾಟರ್ ವರ್ಕ್ಸ್ ಗೆ ಕೊಟ್ಟ ಜಾಗ ನಿಮ್ಮ ತಾತನ ಪಾಲಿಗೆ ಬಂದಿದ್ದವು ಎಂದು ಸೂಚಿಸಲಾಗಿ ಸಾಕ್ಷಿ ಹೊಸದುರ್ಗದಲ್ಲಿದ್ದ ಮನೆಯನ್ನು ನಮ್ಮ ತಾತ ಸ್ವಯಾರ್ಜಿತವಾಗಿ ಖರೀದಿಸಿದ್ದರು ಎಂದು ನುಡಿಯುತ್ತಾರೆ. ಮೀನಾಕ್ಷಿ ವಾಟರ್ ವರ್ಕ್ಸ್ ಗೆ ಕೊಟ್ಟ ಜಾಗ ಒಟ್ಟು ಕುಟುಂಬದ ಆಸ್ತಿ ಆಗಿರುತ್ತದೆ. ಸದರಿ ಮೀನಾಕ್ಷಿ ವಾಟರ್ ವರ್ಕ್ಸ್ ಗೆ ಕೊಟ್ಟ ಜಾಗ ನಮ್ಮ ತಾತನಿಗೆ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಕರಾರಿನಲ್ಲಿರುವ 4 ನೇಸ್ವತ್ತನ್ನು ಸರ್ಕಾರ ನಮ್ಮ ತಾತನಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಮುಂದುವರೆದು ಸದರಿ 4 ಎಕರೆ 5 ಗುಂಟೆಯನ್ನು ನಮ್ಮ ಚಿಕ್ಕಪ್ಪನ ಹೆಸರಿಗೆ ನೊಂದಣಿ ಮಾಡಿಸಿದ್ದರು ಎಂದು ನುಡಿಯುತ್ತಾರೆ. ಕೆಲ್ಲೋಡಿನಲ್ಲಿದ್ದ ನಿವೇಶನ ಮತ್ತು ಮನೆ ಸಹ ನಮ್ಮ ತಾತನ ಪಾಲಿಗೆ ಬಂದಿತ್ತು ಎಂದರೆ ಸರಿಯಲ್ಲ. ಸದರಿ ನಿವೇಶನ ಮತ್ತು ಮನೆ ನಮ್ಮ ತಾತ ರುದ್ರಪ್ಪ ಮತ್ತು ಮಲ್ಲಪ್ಪನ ಹೆಸರಿನಲ್ಲಿದ್ದು, ಅವುಗಳನ್ನು ನಮ್ಮ ಚಿಕ್ಕಪ್ಪ ರುದ್ರಪ್ಪ ಫೋರ್ಜರಿ ಮಾಡಿ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ.

2. 1 ನೇ ದಾವಾ ಸ್ವತ್ತಿನಲ್ಲಿ ನನಗೆ ಯಾವುದೆ ಭಾಗ ಇಲ್ಲ ಎಂದರೆ ಸರಿಯಲ್ಲ. 1 ನೇ ದಾವಾ ಸ್ವತ್ತಿನಲ್ಲಿ ನಾನು ಮನೆ ಕಟ್ಟಿಕೊಂಡು ವಾಸವಾಗಿಲ್ಲ ಎಂದರೆ ಸರಿಯಲ್ಲ. ನಾನು ಕಟ್ಟಿರುವ ಮನೆಯ ಪೂರ್ವಕ್ಕೆ ನಮ್ಮದೆ ಒಟ್ಟು ಕುಟುಂಬದ ಆಸ್ತಿ, ಪಶ್ಚಿಮಕ್ಕೆ ಃ ವಸಂತ ರವರ ಮನೆ ಉತ್ತರಕ್ಕೆ ಮುತ್ತಾಗೊಂದಿ ರೋಡ್, ದಕ್ಷಿಣಕ್ಕೆ ಸುವರ್ಣ ರವರ ಮನೆ ಇರುತ್ತದೆ. ಸದರಿ ಮನೆ ನನಗೆ ಸೇರಿದ್ದಲ್ಲವಾದಿ ಮತ್ತು ಇತರೆ ಪ್ರತಿವಾದಿಯರಿಗೆ ಸೇರಿದ ಮನೆ ಎಂದರೆ ಸರಿಯಲ್ಲ. ನಮ್ಮ ತಾತನಿಗೆ ವಿಭಾಗ ಮಾಡಿಕೊಂಡು ಆಸ್ತಿ ಬಂದಿದ್ದರೂ ವಾದಿ ಮತ್ತು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಪಾಟೀ ಸವಾಲಗೆ ಸಮಯವಕಾಶ ಕೇಳಿರುತ್ತಾರೆ, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.